## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1184(1401) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22.08.2025 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಗ್ರಾಮ ಪಂಚಾಯತಿಗಳಿಗೆ ಪ್ರಸ್ತುತ ಎಷ್ಟು ಅನುದಾನ ಬಿಡುಗಡೆಯಾಗುತ್ತಿದೆ; ಯಾವ ಯಾವ ಯೋಜನೆಯಡಿ ಅನುದಾನ ಬಿಡುಗಡೆಯಾಗುತ್ತಿದೆ; (ವಿವರ ನೀಡುವುದು)</td><td>2024-25ನೇ ಸಾಲಿನಲ್ಲಿ ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ವಿವಿಧ ಯೋಜನೆಯಡಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.
<table>
<tr><th>ಯೋಜನೆ</th><th>ಬಿಡುಗಡೆಯಾದ ಅನುದಾನ (ರೂ. ಕೋಟಿಗಳಲ್ಲಿ)</th></tr>
<tr><td>15ನೇ ಹಣಕಾಸು ಆಯೋಗದ ಅನುದಾನ</td><td>ರೂ. 2133.25</td></tr>
<tr><td>ರಾಜ್ಯ ಹಣಕಾಸು ಆಯೋಗದ ಅಭಿವೃದ್ಧಿ ಅನುದಾನ</td><td>ರೂ.1202.18</td></tr>
<tr><td>ಗ್ರಾಮ ಪಂಚಾಯಿತಿ ಸದಸ್ಯರ ಗೌರವಧನ</td><td>ರೂ.273.74</td></tr>
<tr><td>ಅರಿವು ಕೇಂದ್ರಗಳ ಗ್ರಂಥಾಲಯ ಮೇಲ್ವಿಚಾರಕರ ಗೌರವಧನ</td><td>ರೂ.84.88</td></tr>
<tr><td>ಕೂಸಿನ ಮನೆ</td><td>ರೂ.40.00</td></tr>
</table></td></tr>
<tr><td>ಆ)</td><td>ಗ್ರಾಮ ಪಂಚಾಯತಿಗಳ 15ನೇ ಹಣಕಾಸು ಆಯೋಗ ಯೋಜನೆ ಅನಿರ್ಬಂಧಿತ ಅನುದಾನವು ನಿರ್ಬಂಧಿತ ವಿಭಾಗಕ್ಕೆ ವರ್ಗಾವಣೆಗೊಂಡಿದ್ದು, ಅನಿರ್ಬಂಧಿತ ಅನುದಾನದಡಿ ಮೀಸಲಿರಿಸಿದ ಕಾಮಗಾರಿ ಬಿಲ್ಲು ಪಾವತಿ ಮಾಡುವಲ್ಲಿ ತೊಡಕಾಗಿರುವುದನ್ನು ಸರಿಪಡಿಸಲು ಏನು ಕ್ರಮವಹಿಸಲಾಗಿದೆ;</td><td>15ನೇ ಹಣಕಾಸು ಆಯೋಗದ ಅನಿರ್ಬಂಧಿತ ಅನುದಾನವು ನಿರ್ಬಂಧಿತ ವಿಭಾಗಕ್ಕೆ ವರ್ಗಾವಣೆಗೊಂಡಿರುವ ಸಮಸ್ಯೆಯನ್ನು ಈಗಾಗಲೇ ಬಗೆಹರಿಸಲಾಗಿದೆ.</td></tr>
<tr><td>(ಇ)</td><td>15ನೇ ಹಣಕಾಸು ಯೋಜನೆಯಡಿ ಕೆಲವು ಗ್ರಾಮ ಪಂಚಾಯತಿಗಳಿಗೆ ನಿಗಧಿಪಡಿಸಿದ್ದ ಮೊತ್ತಕ್ಕಿಂತ ಹೆಚ್ಚು</td><td>2024-25ನೇ ಸಾಲಿನಲ್ಲಿ 15ನೇ ಹಣಕಾಸು ಆಯೋಗದ ಅನುದಾನದ ಎರಡನೇ ಕಂತಿನ ನಿರ್ಬಂಧಿತ</td></tr>
</table>

| | | |
|---|---|---|
| | ಮತ್ತು, ಕೆಲ ಗ್ರಾಮ ಪಂಚಾಯತಿಗಳಿಗೆ ಕಡಿಮೆ ಮೊತ್ತದ ಅನುದಾನ ಬಿಡುಗಡೆಯಾಗಲು ಕಾರಣವೇನು; (ವಿವರ ನೀಡುವುದು) | ಅನುದಾನ ರೂ.64.88 ಕೋಟಿಗಳು ಮತ್ತು ಅನಿರ್ಬಂಧಿತ ಅನುದಾನ ರೂ.43.32 ಕೋಟಿಗಳು ಕೇಂದ್ರ ಸರ್ಕಾರದಿಂದ ಕಡಿಮೆ ಬಿಡುಗಡೆಯಾಗಿರುವುದರಿಂದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ ಕಡಿಮೆ ಅನುದಾನ ಹಂಚಿಕೆಯಾಗಿರುತ್ತದೆ. |
| (ಈ) | ಈಗಾಗಲೇ ಬಿಡುಗಡೆಯಾದ ಅನುದಾನಗಳಿಗೆ ಹೆಚ್ಚುವರಿ (ಸಪ್ಲಿಮೆಂಟರಿ) ಕ್ರಿಯಾಯೋಜನೆ ತಯಾರಿಸಲು ಸಾಧ್ಯವಾಗದಿರುವುದರಿಂದ ಅನುದಾನ ಖರ್ಚಾಗದೆ ಬಾಕಿಯಾಗಿರುವುದು ಸರ್ಕಾರ ಗಮನಿಸಿದೆಯೇ; ಈ ಕುರಿತು ಏನು ಕ್ರಮವಹಿಸಿದೆ; | ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಗ್ರಾಮ ಪಂಚಾಯತಿಗಳು ಇ-ಗ್ರಾಮ ಸ್ವರಾಜ್ ತಂತ್ರಾಂಶದಲ್ಲಿ ಒಂದು ಮುಖ್ಯ ಕ್ರಿಯಾಯೋಜನೆ (Main Plan) ಮತ್ತು ನಾಲ್ಕು ಹೆಚ್ಚುವರಿ ಕ್ರಿಯಾಯೋಜನೆ (ಸಪ್ಲಿಮೆಂಟರಿ)ಗಳನ್ನು ತಯಾರಿಸಲು ಅವಕಾಶವಿರುತ್ತದೆ. |
| (ಉ) | ಕುಡಿಯುವ ನೀರಿನ ಕಾಮಗಾರಿಗೆ ಹಣವನ್ನು ಮೀಸಲಿಟ್ಟಿದ್ದು, ಸದರಿ ಕಾಮಗಾರಿಗಳ ಸಂಬಂಧಿಸಿದಂತೆ ಜಲಜೀವನ ಅಥವಾ ಯಾವುದೇ ಯೋಜನೆ ಪೂರ್ಣಗೊಂಡಿದೆ ಎಂದು ಘೋಷಣೆಯಾಗಿ ತಂತ್ರಾಂಶದಲ್ಲಿ ದಾಖಲಾದಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದ ಕಾಮಗಾರಿ ಮಾಡಲು ಅವಕಾಶವಿಲ್ಲದಿರುವುದರಿಂದ ಇದನ್ನು ಸರಿಪಡಿಸುವ ಬಗ್ಗೆ ಏನು ಕ್ರಮವಹಿಸಲಾಗುವುದು? (ವಿವರ ನೀಡುವುದು) | ಕುಡಿಯುವ ನೀರಿನ ವಿಷಯಕ್ಕೆ ಸಂಬಂಧಿಸಿದಂತೆ, ಕ್ರಿಯಾಯೋಜನೆಯಲ್ಲಿ ಮೀಸಲಿಟ್ಟ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡು ಮತ್ತು ಕುಡಿಯುವ ನೀರಿನ ವಿಷಯಕ್ಕೆ ಸಂಬಂಧಿಸಿದ ಯಾವುದೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಬಾಕಿ ಇಲ್ಲದೇ ಇದ್ದಲ್ಲಿ, ಗ್ರಾಮ ಪಂಚಾಯತಿಗಳಿಂದ ದೃಢೀಕರಿಸಿ, ಅಂತಹ ಕಾಮಗಾರಿಗಳಿಗೆ ಮೀಸಲಿಟ್ಟ ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳಲು ಇ-ಗ್ರಾಮ ಸ್ವರಾಜ್ ತಂತ್ರಾಂಶದಲ್ಲಿ ಅವಕಾಶವಿರುತ್ತದೆ. |

ಸಂಖ್ಯೆ: ಗ್ರಾಅಪಂರಾ 154 ಜಿಪಸ 2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.